

ಸೀರೆ ತಂದುಕೊಟ್ಟನಂತೆ, ಪ್ರೀತಿಯಿಂದ ಆಕೆಯನ್ನು ಗೆಲ್ಲಲು ಪ್ರಯತ್ನಿಸಿದನಂತೆ. ತಿಂಗಳು ಕಳೆಯುತ್ತಿದ್ದಂತೆ ಒಮ್ಮೆಲೇ ಗೀತಾ ನಾಪತ್ತೆಯಾದಳಂತೆ. ಗಾಬರಿಯಾಗಿ ಆತ ಊರಿಗೆ ಬಂದರೆ ಆಕೆ ತವರಿಗೆ ಬಂದು ನಂತರ ತನ್ನ ಪ್ರಿಯಕರನೊಡನೆ ಸಂಸಾರ ಆರಂಭಿಸಿದ್ದಳಂತೆ. ಊರೆಲ್ಲಾ ಗಲಾಟೆ ಆಗಿ ಪಂಚಾಯ್ತಿ ಆಯ್ತುಂತೆ. ಗೀತಾ ಹೆದರದೆ, 'ಆತ ಗಂಡಸೇ ಅಲ್ಲ, ಷಂಡ. ಒಮ್ಮೆಯೂ ನನ್ನ ಹೆಣ್ತನ ಅನುಭವಿಸಲು ಅವನಿಂದಾಗಲಿಲ್ಲ. ಷಂಡನೊಡನೆ ಬದುಕಲಾರೆ. ನಾನು ಉಪ್ಪು, ಖಾರ ಉಂಡ ಜೀವ. ಆತ ನಿಜಕ್ಕೂ ಷಂಡ' ಎಂದು ಆಕೆ ವಾದಿಸಿದಾಗ ನೆರೆದ ಜನ ನಂಬಿದರಂತೆ. ಅರವಿಂದನಿಗೆ ಅವಮಾನವಾಯ್ತು, ಅವಳ ತಂದೆ ಮಗಳ ಸಂಬಂಧ ಹರಿದುಕೊಂಡರಂತೆ, ಅರವಿಂದನ ತಂದೆಗೆ ಹೃದಯಾಘಾತವಾಗಿ ಸತ್ತರಂತೆ.

ಧಾರವಾಡದಲ್ಲಿರಲಾಗದೆ ಅರವಿಂದ ತನ್ನ ಸೋದರಮಾವನ ಸಹಾಯದಿಂದ ಬೆಂಗಳೂರಿನ ಖಾಸಗೀ ಕಾಲೇಜ್‌ನಲ್ಲಿ ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿ ಒಂಟಿಯಾಗಿ ಬದುಕತೊಡಗಿದ. ಆತ ಓದು, ಅಧ್ಯಯನ, ಸಂಶೋಧನೆಯಲ್ಲಿ ತನ್ನ ನೋವು ಮರೆತ. ಗೀತಾ ಕೊಟ್ಟ ಆಘಾತದಿಂದ ಆತ ಬೇಗ ಚೇತರಿಸಿಕೊಳ್ಳಲಿಲ್ಲ. ಬಹಳ ಕಾಲ ಒಬ್ಬನೇ ಇದ್ದ. ತನ್ನ ಮೂವತ್ತೆಂಟನೇ ಪ್ರಾಯದಲ್ಲಿ ಅನಿರೀಕ್ಷಿತವಾಗಿ ತನ್ನ ಬದುಕಿಗೆ ಬಂದ. ಆಯಿಗೆ, 'ಗೀತಾ ಮೊದಲೇ ಒಬ್ಬನನ್ನು ಪ್ರೀತಿಸಿದ್ದಳು, ಲಗ್ನ ಬಲವಂತವಾಗಿ ಆಯಿತು, ಅದಕ್ಕೇ ಹೀಗೆ ಮಾಡಿ ತನ್ನ ಪ್ರಿಯಕರನನ್ನು ಸೇರಿದಳು' ಅಂತ ಯಾರೋ ಹೇಳಿದರಂತೆ. ಆಕೆಯಿತ್ತ ಆಘಾತದಿಂದ ಹೊರಬಂದು ತನ್ನನ್ನು ಪ್ರೀತಿಸಿದ, ತನ್ನ ಮಕ್ಕಳ ತಂದೆಯಾದ, ತನಗೆಂದೂ ಯಾವ ಒತ್ತಾಯವನ್ನೂ ಮಾಡಲಿಲ್ಲ, ನಾನು ಸಂಪಾದಿಸಿದ ಹಣವನ್ನೂ ಮುಟ್ಟಲಿಲ್ಲ.